

# ಬೇರು ಕತ್ತರಿಸಿಕೊಳ್ಳುವ ಸಂಕಟ

**ವಲಸೆ ಎಂಬ ಬಹುದೊಡ್ಡ ವಿದ್ಯಮಾನವನ್ನು ಉಪನ್ಯಾಸಕಿಯೊಬ್ಬಳ ವೈಯಕ್ತಿಕ ಬದುಕಿನ ಚೌಕಟ್ಟಿನಲ್ಲಿಟ್ಟು ಕಾಣಿಸುವ ಪ್ರಯತ್ನ ಈ ಕಿರುಚಿತ್ರದಲ್ಲಿದೆ.**

■ ಗೌರಿ

ವಲಸೆ ಎಂಬುದು ಕಳೆದೊಂದು ಶತಮಾನದಲ್ಲಿ ಇಡೀ ಜಗತ್ತನ್ನು ಬಹುವಾಗಿ ಕಾಡಿದ ವಿದ್ಯಮಾನ. ಕೈತುಂಬ ಹಣ ಗಳಿಸುವ ಉದ್ದೇಶದಿಂದ ದೇಶದಿಂದ ದೇಶಕ್ಕೆ ಗುಳೆ ಹೋದವರಿಂದ ಹಿಡಿದು, ಇತ್ತೀಚೆಗೆ ಲಾಕ್‌ಡೌನ್‌ನಲ್ಲಿ ಸುಡುಬಿಸಿಲಲ್ಲಿ ಬರಿಗಾಲಲ್ಲಿ ಊರಿಗೆ ಹೊರಟ ಕಡುಬಡವರ ವಿದ್ರಾವಕ ವಿದ್ಯಮಾನದವರೆಗೆ ವಲಸೆಗೆ ಹಲವು ನೂರು ಆಯಾಮಗಳಿವೆ. ಇಂಥ ವಲಸೆಯನ್ನು ವೈಯಕ್ತಿಕ ಬದುಕಿನ ನೆಲೆಗಟ್ಟಲ್ಲಿ ಇಟ್ಟು ಪರೀಕ್ಷಿಸುವ ಪ್ರಯತ್ನವನ್ನು ‘ಹಿಸ್ಟರಿ ಆಫ್ ಸಿವಿಲೈಜೇಷನ್’ ಎಂಬ ಕಿರುಚಿತ್ರದಲ್ಲಿ ಮಾಡಲಾಗಿದೆ.

ಉಪನ್ಯಾಸಕಿಯೊಬ್ಬಳು ತಾನು ಕೆಲಸ ಮಾಡುತ್ತಿರುವ ಊರನ್ನು, ಆ ಕೆಲಸವನ್ನು ಬಿಟ್ಟು ಬೇರೆ ಕಡೆಗೆ ಹೋಗಲು ನಿರ್ಧರಿಸುತ್ತಾಳೆ. ಆ ಸಂದರ್ಭದಲ್ಲಿ ಅವಳು ಅನುಭವಿಸುವ ತಳಮಳ, ಆಂತರಿಕ ಸಂಘರ್ಷಗಳೇ ಈ ಕಿರುಚಿತ್ರದ ಮುಖ್ಯ ಕೇಂದ್ರ.

ಅವಳು ತನ್ನ ಕೊನೆಯ ಕ್ಲಾಸ್‌ನಲ್ಲಿದ್ದಾಳೆ. ವಿದ್ಯಾರ್ಥಿಗಳೆಲ್ಲ ಪರೀಕ್ಷೆ ಬರೆದು ಎದ್ದು ಹೋಗುವಾಗ ಒಬ್ಬ ಹುಡುಗ ಮಾತ್ರ, ‘ನೀವು ಬಿಟ್ಟು ಹೋಗುತ್ತಿದ್ದೀರಂತೆ, ಹೌದಾ?’ ಎಂದು ಕೇಳುತ್ತಾನೆ. ಅದಕ್ಕೆ ಅವಳು ಉತ್ತರಿಸುವುದಿಲ್ಲವಾದರೂ ಅವಳ ಮುಖದ ಭಾವಗಳೇ ಮನಸಿನೊಳಗಿನ ಸಂಘರ್ಷವನ್ನು ಹೇಳುವಂತಿದೆ.

ಸಿದ್ಧ ಮಾದರಿಯಲ್ಲಿ, ಕಥೆಯ ಆರಂಭ, ಮಧ್ಯ, ಅಂತ ಎಂಬ ಫಾರ್ಮಾಟ್ ಈ ಕಿರುಚಿತ್ರದಲ್ಲಿ ಇಲ್ಲ. ನಿರಂತರವಾಗಿ ಹರಿಯುತ್ತಲೇ ಇರುವ ನದಿಯೊಂದನ್ನು ನಡುವೆ ಒಂದಿಷ್ಟು ಹೊತ್ತು ಕಾಣಿಸುವ ಪ್ರಯತ್ನವಿದು. ಆದರೆ ನದಿಯಿಂದ ಮೊಗೆದುಕೊಂಡ ಒಂದು ಬೊಗಸೆ ನೀರು, ಇಡೀ ನದಿಯ ಗುಣವನ್ನೂ ಹೇಳುತ್ತಿರುತ್ತದೆ ಎಂಬ ಗಟ್ಟಿ ನಂಬಿಕೆಯೂ ಈ ನಿರ್ದೇಶಕರಿಗಿದೆ. ಹಾಗಾಗಿ ಉಪನ್ಯಾಸಕಿಯ ವೈಯಕ್ತಿಕವಾದ ಅನುಭವ ಒಂದು ಸಾರ್ವತ್ರಿಕ ವಿಷಾದವಾಗಿಯೂ ಹಬ್ಬಿಕೊಳ್ಳುತ್ತದೆ. ಚಿಗುರಿ, ಬೇರೂರಿ ಬೆಳೆದ ಜಾಗದಿಂದ ಮರವೊಂದನ್ನು ಕಿತ್ತುಕೊಂಡು ಹೋಗಿ ಇನ್ನೊಂದೆಡೆಗೆ ನೆಡುವ ಪ್ರಯತ್ನದ ಹಾಗೆಯೇ ಇದೆ ಅವಳ ಪರಿಸ್ಥಿತಿ. ಹಾಗೆಂದು ನಿಂತಲ್ಲೇ ನಿಂತಿರುವ ಮರದ ಹಾಗೆ ಮನುಷ್ಯ ಇಲ್ಲವಲ್ಲ. ಅವನದು ಸದಾ ಚಲಿಸುವ ಪ್ರವೃತ್ತಿ. ಕೆಲವರು ದೈಹಿಕವಾಗಿ, ಇನ್ನು ಕೆಲವರು ಮಾನಸಿಕವಾಗಿ ಸದಾಕಾಲ ಚಲಿಸುತ್ತಲೇ ಇರುತ್ತಾರೆ. ಹೀಗೆ ಚಲಿಸುವ ಹಂಬಲದಿಂದಲೇ ನಮ್ಮ ನಾಗರಿಕತೆಗಳು ಇಂದಿರುವ ರೂಪ ತಾಳಿದ್ದು. ಉಪನ್ಯಾಸಕಿಯ ವೈಯಕ್ತಿಕ ಬದುಕಿನಲ್ಲಿ ನಡೆವ ಘಟನೆ, ಈ ದೊಡ್ಡ ಕ್ಯಾನ್ವಾಸನ್ನು ಕಾಣಿಸುತ್ತದೆ. ಈ ಸಿನಿಮಾದ ಉದ್ದೇಶವೇ ಅದು ಎಂಬಂತೆ ಶೀರ್ಷಿಕೆಯನ್ನೂ ‘ನಾಗರಿಕತೆಯ ಇತಿಹಾಸ’ ಎಂಬರ್ಥದಲ್ಲಿಯೇ ಇರಿಸಲಾಗಿದೆ.

ಇದುವರೆಗೆ ಕಟ್ಟಿಕೊಂಡಿದ್ದ ಎಲ್ಲವನ್ನೂ ಹಿಂದಕ್ಕೆ ಬಿಟ್ಟು ಪೂರ್ತಿ ಹೊಸದಾದ ಜಗತ್ತಿಗೆ ಕಾಲಿಡುವುದರ ತಲ್ಲಣ, ಆತಂಕ, ಸಂತಸ, ನಿರೀಕ್ಷೆ, ವೇದನೆ ಎಲ್ಲವೂ ಇಲ್ಲಿನ ಉಪನ್ಯಾಸಕಿಯ ಪಾತ್ರದ ಮೂಲಕ ವ್ಯಕ್ತವಾಗಿದೆ. ಈ ಕಿರುಚಿತ್ರದ ಕಾಡುವ ಗುಣವೇ ಉಪನ್ಯಾಸಕಿಯ ಪಾತ್ರದಲ್ಲಿ ನಟಿಸಿರುವ ಅಕ್‌ಮರಾಲ್ ಜ್ಯಾಕೀವಾ ಅವರ ಭಾವತೀವ್ರ ನಟನೆ. ಚುರುಕಾದ ಸಂಕಲನ, ಧ್ವನಿ ವಿನ್ಯಾಸ, ಛಾಯಾಗ್ರಹಣವೂ ಈ ಕಿರುಚಿತ್ರದ ಪರಿಣಾಮವನ್ನು ಹೆಚ್ಚಿಸಿದೆ.

ಹೆಸರು: ಹಿಸ್ಟರಿ ಆಫ್ ಸಿವಿಲೈಜೇಷನ್(ಇಂಗ್ಲಿಷ್)
ನಿರ್ದೇಶನ: ಝೂನ್ನತ್ ಆಲ್‌ಶನೋವಾ
ನಿರ್ಮಾಣ: ಯೆವ್‌ಜೆನಿಯಾ ಮೊರೆವಾ
ಛಾಯಾಗ್ರಹಣ: ಲೀಂಡ್ರೊ ಫೆರಾರೊ
ಸಂಕಲನ: ಗೇಯ್ಮ್‌ಝೂನ್ ಸಾನ್‌ಬಯೇವ್
ಧ್ವನಿ: ಟಿಯಾಗೊ ಕಾರ್‌ಡೊಸೊ, ಡಿನಿಸ್ ಹೆನ್‌ರಿಕ್ವೇಜ್
ತಾರಾಗಣ: ಕಮರಾಲ್ ಜ್ಯಾಕೀವಾ, ಇಡರ್ ಅಲಿಂಬಾಯೆ

ಕಿರುಚಿತ್ರ ವೀಕ್ಷಣೆಗೆ https://bit.ly/3vwPWU9 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.